ಸಂಪುಟ : 40 ಸಂಚಿಕೆ 132 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 08 ಜೂನ್ 2017 ಗುರುವಾರ POST REG NO . L-2/RNP- 364/TMR/2015-17 ಪುಟಗಳು : 10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com

ಜುಲೈ 17ಕ್ಕೆ ರಾಷ್ಟ್ರಪತಿ ಚುನಾವಣೆ, ಜು.20ಕ್ಕೆ ಮತ ಎಣಿಕೆ: ಮುಖ್ಯ ಚುನಾವಣಾ ಆಯುಕ್ತ ನಸಿಂ ಜೈದಿ

ಆರ್‌ಬಿಐ ಬಡ್ಡಿದರ ಯಥಾಸ್ಥಿತಿ : ಜಿಡಿಪಿ ಅಂದಾಜು ವೆಚ್ಚ ಶೇ. 7.3ಕ್ಕೆ ಇಳಿಕೆ

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಇಂದು ಮಧ್ಯಾಹ್ನ 3ಕ್ಕೆ ಭಾರತ – ಶ್ರೀಲಂಕಾ ನಡುವೆ ಪಂದ್ಯ

₹55 Discount Per Gram
Gold 916 ₹ 2782/-
Silver ₹ 41800/-
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

ಜಿ.ಎಸ್.ಟಿ ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ಅನ್ವಯ ವಾಗುವುದೇ

ಬೆಂಗಳೂರು

ನಿಮ್ಮ ಕನಸಿನ ಮನೆ ಕೊಳ್ಳಲು ಅಥವಾ ನಿರ್ಮಿಸಲು ಯೋಚನೆ ಮಾಡುತ್ತಿದ್ದೀರಾ?. ಹಾಗಾದರೆ ಸದ್ಯಕ್ಕೆ ಸ್ವಲ್ಪ ದಿನಗಳ ಕಾಲ ಆ ನಿರ್ಧಾರ ಬದಿಗಿಡುವುದು ಸೂಕ್ತ.

ಏಕೆಂದರೆ ಜುಲೈನಿಂದ ಜಿಎಸ್‌ಟಿ ಜಾರಿಗೆ ಬರುತ್ತಿರುವ ಹಿನ್ನೆಲೆಯಲ್ಲಿ ಕ್ರೆಡೈ ಬೆಂಗಳೂರು ಜೊತೆ ಸೇರಿ ಡೆವಲಪರ್‌ಗಳು, ಕರ್ನಾಟಕ ಸರ್ಕಾರಕ್ಕೆ ಮನವಿ ಸಲ್ಲಿಸಲು ಮುಂದಾಗಿದ್ದಾರೆ. ಸ್ಟಾಂಪ್‌ಡ್ಯೂಟಿ ಮತ್ತು ರಿಜಿಸ್ಟ್ರೇಷನ್ ಶುಲ್ಕವನ್ನು ಸ್ಥಗಿತ ಅಥವಾ ಕಡಿಮೆ ಮಾಡಲು ಮನವಿ ಮಾಡಲಿದ್ದಾರೆ.

ಸರ್ಕಾರ ಈ ನಡೆಗೆ ಒಪ್ಪಿಕೊಂಡರೆ ನಿಜವಾಗಿಯೂ ಮನೆ ಖರೀದಿದಾರರು ಹಣವನ್ನು ಉಳಿಸಬಹುದು. ಇಲ್ಲವಾದಲ್ಲಿ ಶೇ 10ರಿಂದ 15 ರಷ್ಟು ಹೆಚ್ಚು ಹಣ ವ್ಯಯಿಸಬೇಕಾಗುತ್ತದೆ ಎನ್ನುತ್ತಾರೆ ರಿಯಲ್ ಎಸ್ಟೇಟ್ ಕ್ಷೇತ್ರದ ತಜ್ಞರು.

ಬೆಂಗಳೂರಿನ ಕ್ರೆಡೈ ಕಾರ್ಯದರ್ಶಿ ಸುರೇಶ್ ಹರಿ ಜಿ.ಎಸ್.ಟಿ ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ಅನ್ವಯವಾಗುವುದಿಲ್ಲ, ಏಕೆಂದರೆ ಮನೆ ಖರೀದಿದಾರರು, ಜಿಎಸ್ ಟಿಯ ಜೊತೆ ಜೊತೆಗೆ ಸ್ಟಾಂಪ್ ಡ್ಯೂಟಿ ಮತ್ತು ರಿಜಿಸ್ಟ್ರೇಷನ್ ಶುಲ್ಕ ಕೂಡಾ ಕೊಡಬೇಕು. ಇದು ಆಸ್ತಿ ಮೌಲ್ಯದ ಶೇ 5.6 ರಷ್ಟಾಗುತ್ತದೆ. ಜಿಎಸ್‌ಟಿ ಮತ್ತು ರೇರಾದಿಂದ ಮನೆಯ ದರಗಳು ಖಂಡಿತವಾಗಿ 10 ಶೇಕಡಾದಿಂದ15 ಶೇಕಡಾದಷ್ಟು ಹೆಚ್ಚಾಗಲಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ನಿರ್ಧಾರ ತೆಗೆದುಕೊಂಡು ಸ್ಟಾಂಪ್ ಡ್ಯೂಟಿ ಕಡಿಮೆಗೊಳಿಸಿದರೆ ಮನೆ ಖರೀದಿದಾರರಿಗೆ ಸಹಾಯವಾಗಲಿದೆ ಎಂದು ಹೇಳಿದರು.

ಸಿದ್ದಗಂಗಾ ಶ್ರೀಗಳಿಗೆ ಗೋಕರ್ಣ ಮಹಾಬಲೇಶ್ವರ ಸಾರ್ವಭೌಮ ಪ್ರಶಸ್ತಿ ಪ್ರದಾನ

ಸಿದ್ದಗಂಗೆಯು ಸಂತರ ಕಾಶಿ : ರಾಘವೇಶ್ವರ ಶ್ರೀ

ತುಮಕೂರು

ದೇವ ದೇವತಾ ಸಾರ್ವಭೌಮ ಶ್ರೀಕ್ಷೇತ್ರ ಗೋಕರ್ಣ ಮಹಾಬಲೇಶ್ವರ ಸಾರ್ವಭೌಮ ಪ್ರಶಸ್ತಿಯನ್ನು ನಡೆದಾಡುವ ಶಿವ, ಸಿದ್ದಗಂಗೆಯ ಯತಿಸಾರ್ವಭೌಮ ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಗೆ ಪ್ರದಾನ ಮಾಡಿರುವುದರಿಂದ ಪ್ರಶಸ್ತಿಗೆ ಗೌರವ ಬಂದಿದೆ ಎಂದು ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮಿ ತಿಳಿಸಿದರು.

ಅವರು ಬುಧವಾರ ಸಂಜೆ ಸಿದ್ದಗಂಗೆಯ ಹಳೇಮಠದಲ್ಲಿ ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಗೆ ಗೋಕರ್ಣ ಕ್ಷೇತ್ರದ ವತಿಯಿಂದ ಕೊಡ ಮಾಡುವ ಮಹಾಬಲೇಶ್ವರ ಸಾರ್ವಭೌಮ ಪ್ರಶಸ್ತಿಯನ್ನು ಪ್ರದಾನ ಮಾಡಿ ಮಾತನಾಡುತ್ತಿದ್ದರು.

ರಾಷ್ಟ್ರದಲ್ಲಿ ಎರಡು ಕಾಶಿಗಳಿವೆ. ಒಂದು ಉತ್ತರ ಭಾರತದ ಗಂಗಾ ತಟದ ವಿಶ್ವನಾಥನ ಸನ್ನಿಧಿಯ ಕಾಶಿ. ಮತ್ತೊಂದು ದಕ್ಷಿಣ ಭಾರತದ ಶ್ರೀಕ್ಷೇತ್ರ ಗೋಕರ್ಣ. ಇವೆರಡರ ಜೊತೆಗೆ ಸಿದ್ದಗಂಗೆಯೂ ಕೂಡಾ ಸಂತರ ಕಾಶಿ ಎನ್ನಿಸಿದೆ ಎಂದರು.

ಡಾ. ಶ್ರೀಶಿವಕುಮಾರ ಮಹಾಸ್ವಾಮಿಗಳವರಿಗಿಂತ ದೊಡ್ಡ ವ್ಯಕ್ತಿತ್ವವಿಲ್ಲ, ಇಡೀ ರಾಷ್ಟ್ರ ಇವರನ್ನು ನಡೆದಾಡುವ ದೇವರೆಂದೇ ಕರೆಯುತ್ತಿದೆ. ಸಿದ್ದಗಂಗೆಯಲ್ಲಿ ಓದಿದವರು ದೇಶ, ವಿದೇಶಗಳಲ್ಲಿ ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಿದ್ದಾರೆ ಎಂದರು.

ಮಲೆಮಹದೇಶ್ವರರು ಪವಾಡ ಪುರುಷರು. ಆದರೆ ಅಲ್ಲಿ 70 ಸಾವಿರ ಗೋವುಗಳು ಮೇವಿಲ್ಲದೆ ಹಸಿವಿನಿಂದ ಕಂಗಾಲಾಗಿವೆ. ನಾವುಗಳೆಲ್ಲ ಉಪವಾಸ ಮಾಡಿಯಾದರೂ ಸರಿ ಅವುಗಳಿಗೆ ಮೇವು ಒದಗಿಸಿದ್ದೇವೆ. ಸಿದ್ದಗಂಗೆಯ ಮಹಾ ಸ್ವಾಮಿಗಳು ಮೂರೂವರೆ ಸಾವಿರ ಟನ್‌ಗಳಷ್ಟು 110 ಲೋಡ್ ಹಸಿ ಮೇವು ನೀಡಿದ್ದಾರೆ. ಹಾಗಾಗಿ ರಾಮಚಂದ್ರಾಪುರ ಮಠ, ಸಿದ್ದಗಂಗಾ ಮಠ ಮತ್ತು ಗೋವುಗಳು ಸೇರಿ ತ್ರಿವೇಣಿ ಸಂಗಮವಾಗಿದೆ ಎಂದು ಅಭಿಪ್ರಾಯಪಟ್ಟರು.

ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಗೆ ವಯೋಮಾನದ ಕಾರಣ ಗೋಕರ್ಣಕ್ಕೆ ಬರಲು ಸಾಧ್ಯವಾಗದೆ ಇರುವುದರಿಂದ ನಾವೇ ಪರಿವಾರ ಸಮೇತ ಇಲ್ಲಿಗೆ ಬಂದು ಪ್ರಶಸ್ತಿ ಪ್ರದಾನ ಮಾಡಿದ್ದೇವೆ ಎಂದರು.

ಚೌಕಟ್ಟಿನಲ್ಲಿರುವ ಬೆಳ್ಳಿ ಆತ್ಮಲಿಂಗದ ಪ್ರತಿ ರೂಪವನ್ನು ಮತ್ತು ಸನ್ಮಾನ ಪತ್ರವನ್ನು ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳವರಿಗೆ ಪ್ರದಾನ ಮಾಡಲಾಯಿತು. ಸನ್ಮಾನ ಪತ್ರವನ್ನು ರಾಮಚಂದ್ರಾಪುರ ಮಠದವರು ವಾಚಿಸಿದರು. ಈ ಸಂದರ್ಭದಲ್ಲಿ ಅಟವಿ ಸುಕ್ಷೇತ್ರದ ಶಿವಲಿಂಗ ಮಹಾಸ್ವಾಮಿಗಳು ಸೇರಿದಂತೆ ಹಲವು ಮಠಾಧೀಶರು, ಸುಮಾರು 50 ಮಂದಿಗೂ ಮೀರಿ ರಾಮಚಂದ್ರಾಪುರ ಮಠದ ಪರಿವಾರದವರಲ್ಲದೆ, ಸಿದ್ಧಗಂಗಾ ಮಠದ ಭಕ್ತರು ಉಪಸ್ಥಿತರಿದ್ದರು.

ಗೋಕರ್ಣ ಕ್ಷೇತ್ರದ ವತಿಯಿಂದ ಕೊಡ ಮಾಡುವ ಮಹಾಬಲೇಶ್ವರ ಸಾರ್ವಭೌಮ ಪ್ರಶಸ್ತಿಯನ್ನು ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳಿಗೆ ಪ್ರದಾನ ಮಾಡಲಾಯಿತು. ಶ್ರೀ ರಾಘವೇಶ್ವರ ಭಾರತೀ ಸ್ವಾಮಿ ಸೇರಿದಂತೆ ವಿವಿಧ ಮಠಾಧೀಶರು ಉಪಸ್ಥಿತರಿದ್ದರು

ಗ್ರಾಮೀಣ ಕುಡಿಯುವ ನೀರಿನ ಯೋಜನೆಗೆ ಕೇಂದ್ರದ ಅಡ್ಡಿ

ಬೆಂಗಳೂರು

ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬಹುಗ್ರಾಮ ಕುಡಿಯುವ ನೀರಿನ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಕೇಂದ್ರ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆ ನಿಯಂತ್ರಣ ಹೇರಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವ ಎಚ್ ಕೆ ಪಾಟೀಲ ವಿಧಾನಸಭೆಯಲ್ಲಿ ಆರೋಪಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಪಾವಗಡ ಶಾಸಕ ಕೆ ಎಂ ತಿಮ್ಮರಾಯಪ್ಪ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಪಾವಗಡದ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲು ಸೂಕ್ತವಾದ ಯೋಜನೆ ಮತ್ತು ತಾಂತ್ರಿಕ ಅನುಮೋದನೆಗಳನ್ನು ಈಗಾಗಲೇ ನೀಡಲಾಗಿದ್ದು, ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲು ಅಡೆತಡೆಗಳು ಉಂಟಾಗಿವೆ ಎಂದು ತಿಳಿಸಿದರು.

ಈ ಅಡೆತಡೆಗಳನ್ನು ನಿವಾರಿಸಲು ರಾಜ್ಯ ಸರ್ಕಾರದಿಂದ ಸೂಕ್ತವಾದ ಪ್ರಯತ್ನಗಳನ್ನು ಮಾಡಲಾಗುವುದು. ಅಗತ್ಯವಿರುವ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಅವಕಾಶ ಕಲ್ಪಿಸಬೇಕೆಂದು ಕೇಂದ್ರ ಸರ್ಕಾರವನ್ನು ಪತ್ರ ಮುಖೇನ ಕೋರಲಾಗುವುದೆಂದು ಸಚಿವರು ತಿಳಿಸಿದರು.

ಈ ಹೊಸ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನಾಯಕರ ಸಹಕಾರ ಬಯಸಿದ ಸಚಿವರು, ಈ ವಿಷಯದಲ್ಲಿ ತಾವೂ ಸಹ ಪತ್ರ ಬರೆದು ಹೊಸ ಯೋಜನೆ ಕೈಗೆತ್ತಿಕೊಳ್ಳಲು ಅವಕಾಶ ನೀಡಬೇಕೆಂದು ಒತ್ತಡ ಹೇರಬೇಕೆಂದು ಆಗ್ರಹಿಸಿದರು.

ಪಾವಗಡ ತಾಲ್ಲೂಕಿಗೆ ಶಾಶ್ವತ ಕುಡಿಯುವ ನೀರನ್ನು ಒದಗಿಸುವುದಕ್ಕೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುತ್ತಿದೆ. ಚಿತ್ರದುರ್ಗ ಜಿಲ್ಲೆಯ ಮೊಳಕಲ್ಮೂರು ತಾಲ್ಲೂಕಿನ ಮೊಳಕಾಲ್ಮೂರು ಪಟ್ಟಣ ಮತ್ತು ಗ್ರಾಮಗಳು, ಚಳ್ಳಕೆರೆ ತಾಲ್ಲೂಕಿನ ಗ್ರಾಮಗಳು ಹಾಗೂ ಬಳ್ಳಾರಿ ಜಿಲ್ಲೆಯ ಕೂಡ್ಲಗಿ ತಾಲ್ಲೂಕಿನ ಉಜ್ಜನಿ ಮತ್ತು 216 ಗ್ರಾಮಗಳು, ಹೊಸಪೇಟೆ ತಾಲ್ಲೂಕಿನ ಚಿಲಕನಹಟ್ಟಿ ಮತ್ತು 14 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆಗೆ 2014ರಲ್ಲಿಯೇ ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಮಿತಿಯಲ್ಲಿ 1703.69ಕೋಟಿಗಳಿಗೆ ಅನುಮೋದನೆ ನೀಡಲಾಗಿದೆ ಎಂದರು.

ಮುಂದುವರೆದು, ರಾಜ್ಯ ಸರ್ಕಾರದ ನೀತಿಯಂತೆ ಗ್ರಾಮೀಣ ಪ್ರದೇಶಗಳಲ್ಲಿ ಅನುಷ್ಠಾನಮಾಡುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಡಿ 85 ಎಲ್.ಪಿ.ಸಿ.ಡಿ ನೀರನ್ನು ಒದಗಿಸಲು ಸೇವಾ ವಿನ್ಯಾಸವನ್ನು ಪರಿಷ್ಕರಿಸಬೇಕಾಗಿರುತ್ತದೆ. ಅದರಂತೆ ಅಂದಾಜನ್ನು ಮತ್ತು ಬೇಕಾಗುವ ನೀರಿನ ಪ್ರಮಾಣವನ್ನು ನಿಗಧಿಗೊಳಿಸಲು ಕ್ರಮವಹಿಸಲಾಗುತ್ತಿದೆ ಎಂದು ಹೇಳಿದರು. ಈ ಯೋಜನೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆ, ಯೋಜನಾ ಇಲಾಖೆ, ಜಲಸಂಪನ್ಮೂಲ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಸಹಮತಿ ಪಡೆಯಲು ಕ್ರಮವಹಿಸಲಾಗುತ್ತಿದೆ. ಈ ಯೋಜನೆಯು ಸಂಕೀರ್ಣವಾದ ಹಾಗೂ ಬೃಹತ್ ಮೊತ್ತದ ಯೋಜನೆಯಾಗಿರುವುದರಿಂದ ಹಾಗೂ ಯೋಜನೆಗೆ ಅನುದಾನವನ್ನು ಹೊಂದಿಸಿಕೊಳ್ಳುವುದು ಅನಿವಾರ್ಯವಾಗಿರುತ್ತದೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಮೊಳಕಾಲ್ಮೂರು ಹಾಗೂ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವ ಯೋಜನೆಗೆ ತಗಲುವ ವೆಚ್ಚದಲ್ಲಿ 50% ಅನುದಾನವನ್ನು ಎಸ್.ಸಿ.ಪಿ-ಟಿ.ಎಸ್ .ಪಿ.ಅಡಿಯಲ್ಲಿ ಭರಿಸಿ, ಉಳಿದ 50% ಹಣವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಭರಿಸಲು ತೀರ್ಮಾನಿಸಲಾಗಿದೆ

ವಿಧಾನಸಭೆಯಲ್ಲಿ ಜಿಎಸ್‌ಟಿ ಮಸೂದೆ ಮಂಡನೆ

ಬೆಂಗಳೂರು

ಒಂದು ರಾಷ್ಟ್ರ ಒಂದು ತೆರಿಗೆ ಎನ್ನುವ ಘೋಷ ವಾಕ್ಯದಡಿ ಜುಲೈ 1 ರಿಂದ ಕೇಂದ್ರ ಸರ್ಕಾರ ಜಾರಿಗೆ ತರುತ್ತಿರುವ ಸರಕು ಮತ್ತು ಸೇವಾ ತೆರಿಗೆ ಜಿ.ಎಸ್.ಟಿ. ಮಸೂದೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಮಂಡಿಸಿದರು.

ಈ ಮಸೂದೆಗೆ ಜೆಡಿಎಸ್ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಇದೊಂದು ಜನ ವಿರೋಧಿ ಮಸೂದೆಯಾಗಿದ್ದು, ರೈತರು ಮತ್ತು ಜನ ಸಾಮಾನ್ಯರಿಗೆ ಯಾವುದೇ ರೀತಿಯಲ್ಲೂ ಇದರಿಂದ ಅನುಕೂಲವಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿತು. ಬಿಜೆಪಿ ಸದಸ್ಯರು ಮಸೂದೆಯನ್ನು ಸಮರ್ಥಿಸಿಕೊಂಡರು.

ಕೇಂದ್ರ ಸರ್ಕಾರ ಈಗಾಗಲೇ ಸಂಸತ್ತು ಮತ್ತು ರಾಜ್ಯಸಭೆಯಲ್ಲಿ ಅಂಗೀಕರಿಸಿರುವ ಜಿಎಸ್‌ಟಿ ಮಸೂದೆಗೆ ಶೇ 50ರಷ್ಟು ರಾಜ್ಯಗಳು ಅಂಗೀಕಾರ ನೀಡಬೇಕಾದ ಅಗತ್ಯವಿದ್ದು, ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರ ವಿಧಾನಮಂಡಲದ ಒಪ್ಪಿಗೆ ಪಡೆಯಲು ತಿದ್ದುಪಡಿ ಮಸೂದೆಯನ್ನು ಮಂಡಿಸಿದೆ ಎಂದು ಸಿದ್ದರಾಮಯ್ಯ ಮಸೂದೆಯನ್ನು ಬಲವಾಗಿ ಸಮರ್ಥಿಸಿಕೊಂಡರು.

ಸಿದ್ಧರಾಮಯ್ಯ ಅವರು ಇದನ್ನು ಮಂಡಿಸುತ್ತಿದ್ದಂತೆಯೇ ಜೆಡಿಎಸ್ ಉಪನಾಯಕ ವೈ.ಎಸ್.ವಿ.ದತ್ತಾ ಮಾತನಾಡಿ, ಜಿಎಸ್‌ಟಿ ಬಿಲ್ ಅನ್ನು ಜಾರಿಗೆ ತಂದರೆ ರಾಜ್ಯದ ಮೇಲಾಗುವ ಹಣಕಾಸಿನ ಹೊರೆ ಏನು? ಪರಿಣಾಮವೇನು? ಅನ್ನುವ ಕುರಿತು ಚರ್ಚೆಯಾಗಬೇಕು ಎಂದರು.

ಆಗ ಸಿದ್ಧರಾಮಯ್ಯ, ಜಿಎಸ್‌ಟಿ ಬಗ್ಗೆ ಇಲ್ಲಿ ನಾವು ಚರ್ಚೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ, ಇದು ಕೇಂದ್ರ ಸರ್ಕಾರದ ಕಾಯ್ದೆ. ಅದಾಗಲೇ ಸಂಸತ್ತು ಹಾಗೂ ರಾಜ್ಯಸಭೆಯಲ್ಲಿ ಇದಕ್ಕೆ ಒಪ್ಪಿಗೆ ಸಿಕ್ಕಿದೆ. ಹೀಗಾಗಿ ನಾವು ಔಪಚಾರಿಕವಾಗಿ ಇದನ್ನು ಅಂಗೀಕರಿಸಬೇಕಿದೆ ಎಂದರು.

ಹೀಗಾಗಿ ಇಲ್ಲಿ ನಾವೇನೇ ಚರ್ಚೆ ಮಾಡಿದರೂ »» 05ನೇ ಪುಟಕ್ಕೆ

ಮೂಢನಂಬಿಕೆ ಬಿಡಿ, ವೈಚಾರಿಕತೆ ಬೆಳೆಸಿ:ಸಿದ್ದರಾಮಯ್ಯ

ಬೆಂಗಳೂರು

ಮೂಢನಂಬಿಕೆ ಬಿತ್ತುವಂತಹ ಸುದ್ದಿಗಳಿಗೆ ಪ್ರಾಧಾನ್ಯತೆ ನೀಡದೆ ವೈಚಾರಿಕತೆ ಬೆಳೆಸುವ ವರದಿಗಳಿಗೆ ಆದ್ಯತೆ ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಕರ್ತರಿಗೆ ಕಿವಿಮಾತು ಹೇಳಿದ್ದಾರೆ.

ಮಂಗಳವಾರ ಬೆಂಗಳೂರಿನ ಗಾಂಧಿಭವನ ಮಹದೇವ ದೇಸಾಯಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಹಿಂದುಳಿದ ವರ್ಗಗಳ ಮಾನ್ಯತೆ ಪಡೆದ ಸಂಪಾದಕರ ಮತ್ತು ವರದಿಗಾರರ ಸಂಘವನ್ನು ಉದ್ಘಾಟಿಸಿ ಅವರು ಮಾತನಾಡಿದರು.

> **ಮಾಧ್ಯಮಗಳು ತಮ್ಮ ಕಾರ್ಯ ವೈಖರಿಯನ್ನು ಬಗ್ಗೆ ಟೀಕೆ ಮಾಡಿದರೆ ಅವರನ್ನು ಪ್ರಶ್ನೆ ಮಾಡುವುದಿಲ್ಲ, ಅಂತಹವರ ಬಗ್ಗೆ ದ್ವೇಷ ಸಾಧಿಸುವುದಿಲ್ಲ, ಜೊತೆಗೆ ಒಲೈಕೆ ಮಾಡುವ ಪ್ರವೃತ್ತಿಯೂ ನನ್ನದಲ್ಲ ಎಂದರು. ಮಾಧ್ಯಮ ಕ್ಷೇತ್ರದಲ್ಲಿ ಹಿಂದುಳಿದ ದಲಿತರು ಅತ್ಯಂತ ಕಡಿಮೆ ಇರುವುದನ್ನು ಗಮನಿಸಿದರೆ ಸಮಾಜದಲ್ಲಿ ಇಂದಿಗೂ ಅಸಮತೋಲನ ಇದೆ ಎಂಬುದನ್ನು ತೋರಿಸುತ್ತದೆ.**
>
> ■ ಸಿದ್ದರಾಮಯ್ಯ, **ಮುಖ್ಯಮಂತ್ರಿ**

ಇತ್ತೀಚಿನ ದಿನಗಳಲ್ಲಿ ಕೆಲ ಟಿವಿ ಮಾಧ್ಯಮಗಳು ಬಿತ್ತರಿಸುತ್ತಿರುವ ಸುದ್ದಿಗಳನ್ನು ಪ್ರಸ್ತಾಪಿಸಿ ಮಾತನಾಡಿದ ಮುಖ್ಯಮಂತ್ರಿಯವರು ಕೆಲ ಸುದ್ದಿಗಳಿಂದ ಆದ ಸ್ವತಃ ತಮ್ಮ ಅನುಭವವನ್ನು ಬಿಚ್ಚಿಟ್ಟರು.

ಮೈಸೂರು ದಸರಾ ವೇಳೆ ಅಂಬಾರಿಗೆ ಪೂಜೆ ಸಲ್ಲಿಸುವ ವೇಳೆ ತಾವು ಶೂ ಹಾಕಿಕೊಂಡಿದ್ದಾಗಿ ಸುದ್ದಿ ಪ್ರಸಾರವಾಯ್ತು ಆದರೆ ತಾವು ಶೂ ಹಾಕಿರಲಿಲ್ಲ, ಕೇವಲ ಸಾಕ್ಸ್ ಮಾತ್ರ ನನ್ನ ಕಾಲಲ್ಲಿತ್ತು ಎಂದು ಸ್ಪಷ್ಟನೆ ನೀಡಿದರೂ ನನ್ನ ಸ್ಪಷ್ಟನೆ ಮಾತ್ರ ಪ್ರಸಾರವಾಗಲಿಲ್ಲ, ಶೂ ಹಾಕಿದ್ದರೆಂಬ ಸುದ್ದಿಯೇ ಪ್ರಾಧಾನ್ಯವಾಯ್ತು ಇಂತಹ ಕೆಲಸ ಮಾಧ್ಯಮಗಳಿಂದ ಆಗಬಾರದು.

ಒಮ್ಮೆ ನನ್ನ ಕಾರಿನ ಮೇಲೆ ಕಣ್ಣು ಕಾಣದ ಕಾಗೆ ಕೂತಿದ್ದ ಸುದ್ದಿಗೆ ಮಹತ್ವ ನೀಡಲಾಯ್ತು ಕೇರಳದ ಊರೊಂದರಲ್ಲಿ ಮರದ ಕೆಳಗೆ ಸಮಾರಂಭ ಆಯೋಜಿಸಲಾಗಿತ್ತು ಮರದ ಮೇಲಿದ್ದ ಹಕ್ಕಿಯೊಂದು ನನ್ನ ಮೇಲೆ ಹಿಕ್ಕೆ ಹಾಕಿತು, ಇನ್ನೇನು ಸಿದ್ದರಾಮಯ್ಯ ಕಥೆ ಮುಗಿಯಿತು ಮುಖ್ಯಮಂತ್ರಿ ಸ್ಥಾನದಿಂದ ಇಳಿದೇ ಬಿಡುತ್ತಾರೆ ಎಂದು ವ್ಯಾಪಕವಾಗಿ ಪ್ರಸಾರಗೊಂಡಿತು.

ಇಂತಹ ರೋಚಕ ಹಾಗು ಮೌಢ್ಯ ಬಿತ್ತುವ ಸುದ್ದಿಗಳಿಗೆ ಪ್ರಾಧಾನ್ಯತೆ ಬೇಡ ಎಂದು ಮಾರ್ಮಿಕವಾಗಿ ನುಡಿದರು.

ಕೆಲವೊಮ್ಮೆ ಮನೆಯ ಗಂಡ-ಹೆಂಡಿರ ಜಗಳವೇ ಬೆಳಗಿನಿಂದ ಸಂಜೆಯವರೆಗೂ ಬಿತ್ತರವಾಗುತ್ತದೆ. ಹೀಗಾದರೆ ಸಂಸಾರಗಳ ಗತಿಯೇನು ? ಸುಳ್ಳು ಸುದ್ದಿಗಳನ್ನು ಯಾರೂ ಬಿತ್ತರಬಾರದು. ಹಿಂದಿನ ಕಾಲದಲ್ಲಿ ಮಾಧ್ಯಮಗಳಿಗೆ ತನ್ನದೇ ಆದ ಘನತೆ-ಗೌರವವಿತ್ತು, ಮಾಧ್ಯಮಗಳ ಮಂದಿಯನ್ನು ಕಂಡರೆ ಭಯ ಪಡುವ ಸ್ಥಿತಿ ಇತ್ತು, ಮಾಧ್ಯಮಗಳ ವರದಿಯಿಂದ ಸರ್ಕಾರಗಳು ಉರುಳಿವೆ, ಕೆಲ ಸರ್ಕಾರಗಳು ರಚನೆಯಾಗಿವೆ.

ಮಾಧ್ಯಮ ಕ್ಷೇತ್ರ ಉದ್ಯಮವಾಗಬಾರದು, ಉದ್ಯಮವಾದಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಮುಖ್ಯಮಂತ್ರಿ ಆತಂಕ ವ್ಯಕ್ತಪಡಿಸಿದರು.

ಹಿಂದುಳಿದ ವರ್ಗಗಳಿಗೆ ಸೇರಿದ ಪತ್ರಕರ್ತರೂ ಒಗ್ಗಟ್ಟಾಗಿ ಸಂಘಟನೆಯಾಗಿ ಸಂಘ ಸ್ಥಾಪಿಸಿರುವುದನ್ನು ಅತ್ಯಂತ ಸಂತೋಷವಾಗಿ »» 10ನೇ ಪುಟಕ್ಕೆ

ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಭೂವಿವಾದದ ಪ್ರಕರಣಗಳು

ಇತ್ಯರ್ಥಕ್ಕಾಗಿ ಕಾಯುತ್ತಿವೆ 6882 ಅರ್ಜಿಗಳು..!!!!

ಭೂಷಣ್ ಮಿಡಿಗೇಶಿ
ತುಮಕೂರು

ಇತ್ತೀಚಿನ ದಿನಗಳಲ್ಲಿ ಕೃಷಿವಲಯ ಸಾಕಷ್ಟು ಸಂಕಷ್ಟವನ್ನು ಅನುಭವಿಸುತ್ತಿದೆ. ಬೇಸಾಯ ಮಾಡುವವರ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಲೇ ಇದೆ. ಇದಕ್ಕೆ ಬೇಕಾದಷ್ಟು ಕಾರಣಗಳಿದ್ದರೂ,ಕೃಷಿ ಭೂಮಿ ದಿನೇ ದಿನೇ ಕಡಿಮೆಯಾಗುತ್ತಲೇ ಹೋಗುತ್ತಿದೆ. ಸಾಗುವಳಿ ಮಾಡುವವರ ಸಂಖ್ಯೆಯೂ ಗಣನೀಯವಾಗಿ ಇಳಿದು ಸಾಗುವಳಿಯಾಗುತ್ತಿದ್ದ ಭೂಮಿ ನಿವೇಶನಗಳಾಗುವತ್ತ ದಾಪುಗಾಲು ಹಾಕುತ್ತಿದೆ. ಪಟ್ಟಣಗಳ ಮಗ್ಗುಲ ಜಮೀನುಗಳು ಈಗಾಗಲೇ ನಗರೀಕರಣದ ಪ್ರಭಾವಕ್ಕೆ ಒಳಗಾಗಿ ಭೂಪರಿವರ್ತನೆಯಾಗಿ ವಸತಿಪ್ರದೇಶಗಳಾಗಿ ಮಾರ್ಪಾಡಾಗುತ್ತಿವೆ. ಹಳ್ಳಿಗಾಡುಗಳಲ್ಲಿ ಈ ಸಮಸ್ಯೆ ಇನ್ನೂ ಅಷ್ಟಾಗಿ ತಲೆದೋರದಿದ್ದರೂ, ಭೂಮಿಯ ಬೆಲೆಗಳು ಮಾತ್ರ ಗಗನಕ್ಕೇರಿವೆ. ಹಾಗಾಗಿ ಇಲ್ಲಿಯವರೆಗೂ ಅಷ್ಟಾಗಿ ಕಾಣಬರದಿದ್ದ ಭೂಸಂಬಂಧಿತ ವ್ಯಾಜ್ಯಗಳು ಇತ್ತೀಚಿನ ದಶಕಗಳಲ್ಲಿ ಹೆಚ್ಚಿಗೆ ಕಂಡುಬರುತ್ತಿವೆ.

ಸಣ್ಣಪುಟ್ಟ ಸಮಸ್ಯೆಗಳಿಗೂ ನ್ಯಾಯಾಲಯದ ಮೆಟ್ಟಿಲೇರುವ ಪರಿಪಾಠ ಹಳ್ಳಿಗಾಡಿನಲ್ಲಿ ಸಾಮಾನ್ಯವಾಗಿದೆ. ಇಂತಹ ಪ್ರಕರಣಗಳು ಬೇಗ ಇತ್ಯರ್ಥವಾದರೆ ಮಾತ್ರ ಭೂಮಿಯ ಅಭಿವೃದ್ಧಿ, ಬೇಸಾಯ ಅಥವಾ ಜಮೀನನ್ನು ಪರಭಾರೆ ಮಾಡುವುದಾಗಲೀ, ಇನ್ನಾವುದೇ ರೀತಿಯ ವ್ಯವಹಾರಗಳಾಗಲೀ ನಡೆಯಬೇಕಾಗುತ್ತದೆ.

ಭೂಮಿಗೆ ಸಂಬಂಧಿಸಿದ ವ್ಯಾಜ್ಯಗಳು ಮತ್ತು ತಕರಾರುಗಳಿಗೆ ನಾಗರಿಕರು ಕೆಳಹಂತದ ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಅರ್ಜಿ ಹಾಕಿ ತಕರಾರನ್ನು ಬಗೆಹರಿಸಿಕೊಳ್ಳುತ್ತಾರೆ. ಆದರೆ ತಹಸೀಲ್ದಾರ್ ನ್ಯಾಯಾಲಯಗಳಲ್ಲಿ ಬಂದಿರುವ ತೀರ್ಮಾನವನ್ನು ಪ್ರಶ್ನಿಸಿ ಮತ್ತೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾವೆ ಹೂಡುವ ಅವಕಾಶಗಳಿರುವುದರಿಂದ ಸಾಮಾನ್ಯವಾಗಿ ಯಾರೂ ತಹಸೀಲ್ದಾರರ ತೀರ್ಮಾನವನ್ನು ಒಪ್ಪಿಕೊಳ್ಳುವುದು ಕಷ್ಟ. ಇಂತಹ ಇಪ್ಪತ್ತು ಸಾವಿರಕ್ಕೂ ಹೆಚ್ಚು ಭೂಸಂಬಂಧಿತ ವಿವಾದಾತ್ಮಕ ಪ್ರಕರಣಗಳ ಸರಮಾಲೆಯೇ ತುಮಕೂರು ಜಿಲ್ಲೆಯ ಮೂರೂ ಉಪವಿಭಾಗಗಳಲ್ಲಿ ಇದೆ.

ತುಮಕೂರು ಜಿಲ್ಲೆಯಲ್ಲಿ ತುಮಕೂರು, ತಿಪಟೂರು ಮತ್ತು ಮಧುಗಿರಿ ಈ ಮೂರು ಉಪವಿಭಾಗಗಳು ಇದ್ದು, ಜಿಲ್ಲೆಯ ಹತ್ತು ತಾಲ್ಲೂಕುಗಳು ಈ ಉಪವಿಭಾಗಗಳ ವ್ಯಾಪ್ತಿಗೆ ಬರುತ್ತವೆ. ಮೂರು ವಿಭಾಗಗಳಲ್ಲಿಯೂ ಮೂವರು ಉಪವಿಭಾಗಾಧಿಕಾರಿಗಳು ಕಂದಾಯ ಇಲಾಖೆಯ ಉಸ್ತುವಾರಿಯನ್ನು ಹೊತ್ತು ಕರ್ತವ್ಯನಿರ್ವಹಿಸುತ್ತಿದ್ದಾರೆ.

ತುಮಕೂರು ಉಪವಿಭಾಗದಲ್ಲಿ ಅತಿ ಹೆಚ್ಚು ಭೂವಿವಾದಗಳು: ನಗರೀಕರಣದ ಪ್ರಭಾವ ತುಮಕೂರು ನಗರದ ಸುತ್ತಮುತ್ತಲ ಹತ್ತಾರು ಕಿಲೋಮೀಟರುಗಳವರೆಗೆ ವ್ಯಾಪಿಸಿ, ಕೃಷಿ ಮಾಡುತ್ತಿದ್ದ ಜಮೀನಿಗೆ ಇನ್ನಿಲ್ಲದ ಬೆಲೆ ಬಂದಿದೆ. ಭೂಮಿಯನ್ನು ಪರಭಾರೆ ಮಾಡಿರುವವರ ಸಂಖ್ಯೆಯೂ ಸಾಕಷ್ಟಿದೆ. ಹೆಚ್ಚು ಹೆಚ್ಚು ಭೂಮಿಗೆ ಸಂಬಂಧಿಸಿದ ವ್ಯವಹಾರಗಳು ನಡೆಯುತ್ತಾ ಹೋದಂತೆ ತಕರಾರುಗಳ ಸಂಖ್ಯೆಯೂ ಗಣನೀಯವಾಗಿ ಜಾಸಿಯಾಗುತ್ತವೆ. ಹಳ್ಳಿಗಾಡಿನ ವ್ಯಾಜ್ಯಗಳಿಗಿಂತ ನಗರದ ಮಗ್ಗುಲಲ್ಲಿರುವ ಭೂವಿವಾದಗಳ ಸಂಖ್ಯೆಯೇ ಇಲ್ಲಿ ಜಾಸ್ತಿಯೆನ್ನಬಹುದು. ತುಮಕೂರು ಉಪವಿಭಾಗದ ವ್ಯಾಪ್ತಿಗೆ ಗುಬ್ಬಿ, ತುಮಕೂರು ಮತ್ತು ಕುಣಿಗಲ್ ತಾಲ್ಲೂಕುಗಳು ಸೇರುತ್ತವೆ. ತುಮಕೂರು ಮತ್ತು ಗುಬ್ಬಿ ಪಟ್ಟಣಗಳ ಅಂತರ ಕೇವಲ ಇಪ್ಪತ್ತು ಕಿಲೋಮೀಟರುಗಳಷ್ಟಿದ್ದು, ಬಹುತೇಕ ಭೂಮಿಗಳು ಈಗಾಗಲೇ ಪರಿವರ್ತನೆಯ ಹಾದಿ ತುಳಿದಿವೆ. ತುಮಕೂರು ಉಪವಿಭಾಗದಲ್ಲಿ 2013-14 ನೇ ಸಾಲಿನಿಂದ ಹಿಡಿದು 2015-16 ನೇ ಸಾಲಿನವರೆಗೆ ಒಟ್ಟು 3604 »» 05ನೇ ಪುಟಕ್ಕೆ

ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ

ಉಪ ವಿಭಾಗಗಳ ಹೆಸರು	ಬಾಕಿ ಇರುವ ಪ್ರಕರಣಗಳ ಸಂಖ್ಯೆ
ತುಮಕೂರು	3604
ತಿಪಟೂರು	620
ಮಧುಗಿರಿ	2658
ಒಟ್ಟು	6882

ವಿದ್ಯುತ್ ಸಮಸ್ಯೆ ಚರ್ಚಿಸಲು ಪಾಲಿಕೆಯಲ್ಲಿ ಸಭೆ

ವಿದ್ಯುತ್ ಕಂಬಗಳ ಮಾಹಿತಿ ನೀಡಲು ಬೆಸ್ಕಾಂ ಒಪ್ಪಿಗೆ

ತುಮಕೂರು

ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈ ಹಿಂದೆ 3,400 ವಿದ್ಯುತ್ ಕಂಬಗಳನ್ನು ಅಳವಡಿಸಿರುವ ಬಗ್ಗೆ ಶೀಘ್ರವೇ ಪಾಲಿಕೆಗೆ ಮಾಹಿತಿ ನೀಡುವುದಾಗಿ ಬೆಸ್ಕಾಂ ಅಧಿಕಾರಿಗಳು ಭರವಸೆ ನೀಡಿದರು.

ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳುತ್ತಿರುವ ವಿದ್ಯುತ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಚರ್ಚಿಸುವ ಸಲುವಾಗಿ ಬುಧವಾರ ಬೆಳಗ್ಗೆ ನಗರದ ಪಾಲಿಕೆ ಕಛೇರಿಯ ಸಭಾಂಗಣದಲ್ಲಿ ಪಾಲಿಕೆಯಿಂದ ಏರ್ಪಟ್ಟಿದ್ದ ಸಭೆಯಲ್ಲಿ ಬೆಸ್ಕಾಂ ಅಧಿಕಾರಿಗಳು ಪಾಲಿಕೆಯ ಜೆ.ಡಿ.ಎಸ್. ಸದಸ್ಯ ಟಿ.ಆರ್. ನಾಗರಾಜ್(7ನೇ ವಾರ್ಡ್) ಅವರು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸುತ್ತ ಮೇಲಿನಂತೆ ಪ್ರತಿಕ್ರಿಯಿಸಿದರು.

''ಕಳೆದ ಎರಡು ವರ್ಷಗಳ ಹಿಂದೆ ಪಾಲಿಕೆಯಲ್ಲಿ ಇಂತಹುದೇ ಸಭೆ ನಡೆದಿತ್ತು. ಸಂಸದರು, ಶಾಸಕರೂ ಆ ಸಭೆಯಲ್ಲಿ ಭಾಗವಹಿಸಿದ್ದರು. ಆ ಸಭೆಯಲ್ಲಿ ಬೆಸ್ಕಾಂನಿಂದ ತುಮಕೂರು ನಗರದಲ್ಲಿ 3,400 ವಿದ್ಯುತ್ ಕಂಬಗಳನ್ನು ಅಳವಡಿಸಿರುವ ಬಗ್ಗೆ ಮಾಹಿತಿ ಕೇಳಲಾಗಿತ್ತು. ವಾರ್ಡ್‌ವಾರು ಆಯಾ ಸದಸ್ಯರಿಗೆ ಈ ಬಗ್ಗೆ ಮಾಹಿತಿ ಒದಗಿಸುವುದಾಗಿ ಅಂದು ಬೆಸ್ಕಾಂ ಅಧಿಕಾರಿಗಳು ಹೇಳಿದ್ದರು. ಆದರೆ ಆ ಸಭೆ ನಡೆದು ಎರಡು ವರ್ಷಗಳಾದರೂ, ಬೆಸ್ಕಾಂನಿಂದ ಮಾಹಿತಿ ದೊರೆತಿಲ್ಲ. ನಾನು ಪ್ರತಿನಿಧಿಸುವ 7 ನೇ ವಾರ್ಡ್‌ನಲ್ಲಿ 100 ವಿದ್ಯುತ್ ಕಂಬಗಳನ್ನು ಅಳವಡಿಸಿರುವುದಾಗಿ ಆ ಸಭೆಯಲ್ಲಿ ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದರು. ಅಷ್ಟೊಂದು ಕಂಬಗಳನ್ನು ನನ್ನ ವಾರ್ಡ್‌ನಲ್ಲಿ ಹಾಕಿಲ್ಲವೆಂದು ನಾನು ಹೇಳಿದ್ದೆ. ಈವರೆವಿಗೂ ಆ ಬಗ್ಗೆ ನನಗೆ ಮಾಹಿತಿ ಇಲ್ಲ, ಹಾಗಾದರೆ ಈ ವಿಷಯದಲ್ಲಿ ಅಕ್ರಮಗಳು ಆಗಿವೆಯೇ?'' ಎಂದು ಟಿ.ಆರ್. ನಾಗರಾಜ್ ಅವರು ಹೇಳಿದ್ದು ಸಭೆಯಲ್ಲಿ ತೀವ್ರ ಚರ್ಚೆಗೆ ಎಡೆಮಾಡಿಕೊಟ್ಟಿತು.

'' ಹಿಂದಿನ ಸಭೆಯ ಮಾದರಿಯಲ್ಲೇ ಈಗಿನ ಸಭೆಯೂ ನಡೆದಲ್ಲಿ ಯಾರಿಗೂ ಸಹಾ ಯಾವುದೇ ಪ್ರಯೋಜನ ಆಗುವುದಿಲ್ಲ'' ಎಂದು ನಾಗರಾಜ್ ಉದ್ಗರಿಸಿದರು.

''ನಗರದಲ್ಲಿ ಈ ಹಿಂದೆ ಕೋಟ್ಯಂತರ ರೂ.ಗಳನ್ನು ವೆಚ್ಚಮಾಡಿ ನಗರದಲ್ಲಿ ಭೂಗತ (ಅಂಡರ್ ಗ್ರೌಂಡ್) ವಿದ್ಯುತ್ ಕೇಬಲ್ ಅಳವಡಿಸಿದ್ದು, ಕಿಂಚಿತ್ತೂ ಉಪಯೋಗಕ್ಕೆ ಬಾರದೆ ವ್ಯರ್ಥವಾದ ಬಗೆಗೂ ಅಂದಿನ ಸಭೆಯಲ್ಲಿ ಚರ್ಚಿಸಲಾಗಿತ್ತು. ಆದರೂ ಮುಂದೇನಾಯಿತು ಎಂಬುದು ಇನ್ನೂ ನಿಗೂಢವಾಗಿದೆ'' ಎಂದು ವಿಷಾಧಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬೆಸ್ಕಾಂನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೆಹಬೂಬ್ ಶರೀಫ್ ಅವರು, ''ಮುಂದಿನ »» 10ನೇ ಪುಟಕ್ಕೆ

ಸಾಮಗ್ರಿಗಳ ಕೊರತೆ

ಚರ್ಚೆ ಮುಂದುವರೆದಾಗ ಮಧ್ಯೆ ಪ್ರವೇಶಿಸಿದ ಬೆಸ್ಕಾಂನ ಮತ್ತೋರ್ವ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅಭಿಲಾಶ್ ಅವರು, ''ವಿದ್ಯುತ್ ಕಂಬಗಳ ಸ್ಥಳಾಂತರದ ವಿಷಯದಲ್ಲಿ ನಮ್ಮಲ್ಲೂ ಅಗತ್ಯ ಸಾಮಗ್ರಿಗಳ ಕೊರತೆ ಇರುವುದೇ ಮುಖ್ಯಕಾರಣವಾಗುತ್ತಿದೆ''